ಶ್ರೀ ಜೆ.ಹೆಚ್. ಪಟೇಲ್ (ಕೈಗಾರಿಕೆ ಮತ್ತು ವಿದ್ಯುತ್ ಸಚಿವರು)—

ಅ) ಹೌದು.

ಆ) ೭೨,೦೮,೭೫೦ ರೂ.ಗಳು.

ಇ) ಮೂಲಧನ ರೂ. ೧ ಕೋಟಿ. ಹಾಲಿ ಇರುವ ಬಂಡವಾಳ ೭೫.೭೪ ಲಕ್ಷ ರೂ.ಗಳು.

ಈ) ೧೧ ಎಕರೆ ೩೧ ಗುಂಟೆ.

ಉ) ನೌಕರರ ಸಂಖ್ಯೆ–೧೬೬ ವೇತನವನ್ನು ಸರಿಯಾಗಿ ನೀಡಲಾಗುತ್ತಿದೆ.

ರಾಜ್ಯದಲ್ಲಿ ಸೇಲಂ ಮಾದರಿಯ ಕೈಗಾರಿಕಾ ತರಬೇತಿ ಕೇಂದ್ರಗಳನ್ನು ತೆರೆಯುವ ಬಗ್ಗೆ

೧೦೦. ಶ್ರೀ ವಂಜಯ್ಯನ ಮಠ (ಗುಳೇದ ಗುಡ್ಡ).— ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಸೇಲಂ ಮಾದರಿಯ ಕೈಗಾರಿಕಾ ತರಬೇತಿ ಕೇಂದ್ರಗಳನ್ನು ತೆರೆಯುವ ಉದ್ದೇಶ ವಿದೆಯೆ?

ಆ) ಹಾಗಿದ್ದಲ್ಲಿ ಎಲ್ಲಿ ತೆರೆಯುವ ಉದ್ದೇಶವಿದೆ, ಹಾಗೂ ಅವುಗಳನ್ನು ಎಂದಿನಿಂದ ಪ್ರಾರಂಭಿಸ ಲಾಗುವುದು ?

ಶ್ರೀ ಬಿ. ಎ. ಜೀವಿಜಯ (ಸಣ್ಣಪ್ರಮಾಣದ ಕೈಗಾರಿಕಾ ಸಚಿವರು).—

ಅ) ರಾಜ್ಯದಲ್ಲಿ ಕೈಮಗ್ಗ ತಾಂತ್ರಿಕ ಕೇಂದ್ರವನ್ನು ತೆರೆಯುವ ಉದ್ದೇಶವಿದೆ.

ಆ) ಅದು ಇನ್ನೂ ಪ್ರಾರಂಭಿಕ ಹಂತದಲ್ಲಿರುವುದರಿಂದ ಸ್ಥಳ ಮತ್ತು ದಿನಾಂಕವನ್ನು ಇನ್ನೂ ನಿಗಧಿಪಡಿಸಲಾಗುವುದಿಲ್ಲ.

ಮೈಸೂರು ನಗರದ ಕೈಮಗ್ಗ ಮತ್ತು ವಿದ್ಯುತ್ ಮಗ್ಗದವರ ಕ್ಷೀಣ ಸ್ಥಿತಿ

೧೦೧. ಶ್ರೀ ಎಂ ಚಿಕ್ಕಬೋರಯ್ಯ (ಚಾಮರಾಜ).— ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮೈಸೂರು ನಗರದಲ್ಲಿ ನೂರಾರು ವರ್ಷಗಳಿಂದಲ್ಲೂ ಕೈಮಗ್ಗ ಮತ್ತು ವಿದ್ಯುತ್ ಮಗ್ಗಗಳಿಂದ ಬಟ್ಟೆ ಮಾಡುವ ವೃತ್ತಿಯಿಂದ ಜೀವನ ಮಾಡುತ್ತಿರುವ ಳ ಸಾವಿರ ಕುಟುಂಬಗಳಿಗೆ ಸರ್ಕಾರದಿಂದ ಯಾವ ಸಹಾಯ ದೊರೆಯದೆ ಅವರು ಕ್ಷೀಣಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಕೈಗಾರಿಕೋದ್ಯಮಿಗಳಿಂದ ಸರ್ಕಾರಕ್ಕೆ ಈಗಾಗಲೇ ಅನೇಕ ಅರ್ಜಿಗಳು ಬಂದಾಗ್ಯೂ ಕೂಡ ಹಣದ ಅನುಕೂಲತೆ ಅಥವಾ ಇತರ ಸಹಾಯ ಸರ್ಕಾರದಿಂದ ದೊರೆಯದೆ ಆ ವೃತ್ತಿದಾರರು ಕಷ್ಟಕ್ಕೀಡಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಆ ರೀತಿ ಬವಣೆ ಪಡುತ್ತಿರುವ ಕೈಗಾರಿಕೋದ್ಯಮಿಗಳಿಗೆ ಅದಷ್ಟು ಬೇಗನೆ ಸರ್ಕಾರದ ಸೂಕ್ತ ಸಹಾಯವನ್ನು ದೊರಕಿಸಿಕೊಡುತ್ತಿದೆಯೇ ?

ಶ್ರೀ ಬಿ. ಎ. ಜೀವಿಜಯ, (ಸಣ್ಣ ಕೈಗಾರಿಕಾ ಸಚಿವರು).—

ಅ) ಇಲ್ಲ.

ಆ) ಮೈಸೂರು ಸಿಟಿ ವಿದ್ಯುತ್ ಮಗ್ಗಗಳ ಮಾಲೀಕರ ಸಹಕಾರ ಸಂಘದಿಂದ ಸರ್ಕಾರದ ಧನ ಸಹಾಯಕ್ಕೆ ಅರ್ಜಿ ಬಂದಿದ್ದು, ಸಹಾಯವನ್ನು ಈಗಾಗಲೇ ನೀಡಲಾಗಿದೆ.

ಇ) ಉದ್ಭವಿಸುವುದಿಲ್ಲ.